ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 381/2019

ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-2

ದಿ: **22.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಚಂದ್ರಮ್ಮ |
| ಗಂಡ/ತಂದೆಯ ಹೆಸರು | ರಾಜಣ್ಣ |
| ವಯಸ್ಸು | 40 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಕೆಬ್ಬೆಕೊಪ್ಪಲು ಗ್ರಾಮ, ಹುಣಸೂರು |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಆತ ನನ್ನ ಮೈದುನ. ಚಾಸಾ4 ರಿಂದ 6 ಗೊತ್ತು. ಸುಮಾರು 10 ವರ್ಷಗಳ ಹಿಂದೆ ಆರೋಪಿ ತಂಬಾಕು ಗಿಡಗಳನ್ನು ಜಮೀನಿನಲ್ಲಿ ಹಾಕಿದ್ದರು. ನಾನು ಏಕೆ ಹಾಕಿದ್ದೀರಿ ಎಂದು ಕೇಳಿದಾಗ, ಆರೋಪಿ ಈ ಜಮೀನು ನನಗೆ ಸೇರಿದ್ದು ಎಂದು ಉತ್ತರಿಸಿದನು. ಆರೋಪಿ ನನ್ನನ್ನು ಸಾಯಿಸಿ ಆ ಜಮೀನಿನಲ್ಲೇ ಹೂತಾಕುತ್ತೇನೆಂದು ಕೊಲೆ ಬೆದರಿಕೆ ಹಾಕಿದನು. ಆ ಸಮಯದಲ್ಲಿ ಚಾಸಾ5 ಮತ್ತು 6 ಸ್ಥಳಕ್ಕೆ ಬಂದರು. ನಂತರ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ-**2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**2**(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರನ್ನು ಜರುಗಿಸಿರುತ್ತಾರೆ. ಆಗ ಸ್ಥಳದಲ್ಲಿ ಚಾಸಾ5 ಮತ್ತು 6 ರವರು ಹಾಜರಿದ್ದರು. ಮಹಜರ್ ಜರುಗಿಸಿದಾಗ ಸಮಯ ಬೆಳಿಗ್ಗೆ 8 ಗಂಟೆಯಾಗಿತ್ತು. ಪೊಲೀಸರ ಸಮಕ್ಷಮ ಮುಂದುವರಿದ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ಗುರುತಿಸಿರುವ ನಿಪಿ1 ಮಹಜರ್ ನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

ಸಿ.ಸಿ. 381/2019

ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ-2

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ**

ದಿ:22.05.2015 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಗಲಾಟೆ ನಡೆದಿರುತ್ತದೆ ಎಂದರೆ ಸರಿ. ಆರೋಪಿ ಈ ಹಿಂದೆ ನಿಮ್ಮ ಗಂಡನಿಗೆ ನಿಮ್ಮನ್ನು ಮುಗಿಸುತ್ತೇನೆ ಎಂದು ಪ್ರಾಣಬೆದರಿಕೆ ಹಾಕಿದನು ಎಂದರೆ ಸರಿ. ಆ ಸಮಯದಲ್ಲಿ ಚಾಸಾ4 ರವರು ಜಗಳವನ್ನು ಬಿಡಿಸಿ ಸಮಾಧಾನ ಮಾಡಿದರು ಎಂದರೆ ಸರಿ. ಈ ಬಗ್ಗೆ ಗ್ರಾಮದ ಮುಖಂಡರಾದ ಚಾಸಾ5 ಮತ್ತು 6 ರವರಿಗೆ ತಿಳಿಸಿದಾಗ ನ್ಯಾಯಪಂಚಾಯತಿ ಮಾಡುವುದಾಗಿ ಹೇಳಿದ್ದರಿಂದ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಆರೋಪಿ ನ್ಯಾಯಪಂಚಾಯತಿಗೆ ಬರದಿದ್ದ ಕಾರಣ ತಡವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ದಿ:11.07.2015 ರಂದು ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ2 ಮತ್ತು 3 ರವರು ಹಾಜರಿದ್ದರು ಎಂದರೆ ಸರಿ. ನಿಪಿ1 ನ್ನು ಬೆಳಿಗ್ಗೆ 10 ರಿಂದ 10.40 ಗಂಟೆ ಸಮಯದಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನನಗೆ ಆರೋಪಿ ಕೈಯಿಂದ ಮೈಕೈಗೆಲ್ಲಾ ಹೊಡೆದಿದ್ದರಿಂದ ನನ್ನ ಮೈಕೈಗೆ ನೋವುಂಟಾಗಿತ್ತು, ಯಾವುದೇ ರಕ್ತಗಾಯವಾಗಿರುವುದಿಲ್ಲ. ಆದ್ದರಿಂದ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದು ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀಸವಾಲು ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ**

ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ್ದ ಹಾಗೆ ದೂರನ್ನು ನೀಡಿರುತ್ತೇನೆ. ನಾನು ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ ಹೇಳಿರುವ ವಿಚಾರಗಳನ್ನು ನಾನು ಈ ದಿನವೇ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಆ ವಿಚಾರಗಳನ್ನು ಹೇಳಿರುತ್ತೇನೆ. ನಿಪಿ2 ನ್ನು ಬೇರೆ ಕಡೆ ಬರೆಸಿಕೊಂಡು ಬಂದು ಠಾಣೆಗೆ ನೀಡಿರುತ್ತೇನೆ. ನಿಪಿ2 ನ್ನು ಘಟನೆ ನಡೆಯಿತು ಎಂದು ಹೇಳಿದ್ದ ದಿನದಿಂದ ಸುಮಾರು 10-20 ದಿನಗಳ ನಂತರ ತಯಾರು ಮಾಡಿಸಿರುತ್ತೇನೆ. ಪೊಲೀಸರು ಆರೋಪಿಯನ್ನು ಕರೆಸಿ ವಿಚಾರಿಸುತ್ತೇನೆ ಎಂದು ಹೇಳಿದ ಕಾರಣ ನಾನು ತಡವಾಗಿ ದೂರನ್ನು ನೀಡಿರುತ್ತೇನೆ. ನಿಪಿ2 ನೀಡುವ ಕಾಲದಲ್ಲಿ ಸುಮಾರು 48 ದಿನಗಳು ತಡವಾಗಿದೆ ಎಂದರೆ ಸರಿ. ನೀವು ಜಮೀನಿನ ವಿಚಾರಕ್ಕೆ ರಾಜಿಯಾಗದಿದ್ದರೆ ದೂರನ್ನು ನೀಡುತ್ತೇನೆ ಎಂದು ಆರೋಪಿಗೆ ಬೆದರಿಕೆ ಹಾಕುತ್ತಿದಿರಿ ಎಂದರೆ ಸರಿಯಲ್ಲ.

ಜಮೀನು ಸುಮಾರು 2 ಎಕರೆ ಇರುತ್ತದೆ. ನನಗೆ ಒಂದು ಎಕರೆ ಮತ್ತು ಆರೋಪಿಗೆ ಒಂದು ಎಕರೆ. 2 ಎಕರೆ ಜಮೀನಿನ ವಿಸ್ತೀರ್ಣದ ಬಗ್ಗೆ ನಿಪಿ2 ರಲ್ಲಿ ಬರೆಸಿರುತ್ತೇನೆ. ನಾನು ಜಮೀನು ಯಾವ ಸರ್ವೆ ನಂಬರಿಗೆ ಸೇರಿರುತ್ತದೆ ಎಂದು ನಿಪಿ2 ರಲ್ಲಿ ಬರೆಸಿರುವುದಿಲ್ಲ. ನಾನು ಜಮೀನಿನ ಪಹಣಿಯನ್ನು ನಿಪಿ2 ನೀಡುವ

ಸಮಯದಲ್ಲಿ ಸೇರಿಸಿರುವುದಿಲ್ಲ. ನನ್ನ ಅತ್ತೆಯ ಹೆಸರು ಜಯಮ್ಮ, ಅವರು ಬದುಕಿದ್ದಾರೆ. ಜಯಮ್ಮರವರ ಹೆಸರಿನಲ್ಲಿ ಸರ್ವೆ ನಂ.**60/5** ರಲ್ಲಿ **4** ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಆ ಜಮೀನಿನ ಮೇಲೆ ಸಾಲವಿರುತ್ತದೆ. ಸಾಕ್ಷಿ ಮುಂದುವರಿದು ಈಗ ಸಾಲ ಇರುವುದಿಲ್ಲ, ನಾವು ಸುಮಾರು **60,000** ರೂ. ಕಟ್ಟಿರುತ್ತೇವೆ.

ಆರೋಪಿ **2** ಎಕರೆ **30** ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾನೆ, ನೀವು **1** ಎಕರೆ **10** ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೀರಿ, ಆರೋಪಿಯ ಬಳಿ ಹೆಚ್ಚಿನ ವಿಸ್ತೀರ್ಣ ಇದೆ ಎಂದು ನಿಮ್ಮ ಮಧ್ಯೆ ವೈಮನಸ್ಸು ಇದೆ ಎಂದರೆ ಸರಿ. ನೀವು ಆರೋಪಿಯ ಬಳಿ ಹೆಚ್ಚಿನ ಜಮೀನಿದೆ ಎಂದು ಅವರೊಂದಿಗೆ ಆಗಾಗ ಜಗಳ ಮಾಡುತ್ತೀರಾ ಎಂದರೆ ಸರಿಯಲ್ಲ. ಚಾಸಾ**4** ರಿಂದ **6** ರವರನ್ನು ಘಟನಾ ಸ್ಥಳಕ್ಕೆ ನಾನೇ ಕರೆಸಿರುತ್ತೇನೆ. ಮನೆಗೆ ಹೋಗಿ ಅವರನ್ನು ನಾನೇ ಕರೆದಿರುತ್ತೇನೆ. ನೀವೇ ಆರೋಪಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ, ಹಾಗೂ ಅವಾಚ್ಯಶಬ್ದಗಳಿಂದ ಬೈದಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಗಂಡನಿಗೆ ಪ್ರಾಣಬೆದರಿಕೆ ಹಾಕಿರುವ ಬಗ್ಗೆ ಹೇಳಿದ್ದು, ಹಾಗೂ ಅವಾಚ್ಯಶಬ್ದಗಳಿಂದ ನಿಂದಿಸಿರುವುದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ದಿ:**22.05.2015** ರಂದು ಆರೋಪಿ ಯಾವ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ**1** ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ. ನಿಪಿ**1** ಮತ್ತು **2** ರ ಮೇಲೆ ನಾನು ಸಹಿ ಹಾಕಿರುವುದಿಲ್ಲ. ನಿಪಿ**1** ಮತ್ತು **2** ರ ಮೇಲೆ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿ. ಆರೋಪಿ ಹೆಚ್ಚಿನ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾನೆಂದು ಅವನ ಮೇಲಿರುವ ದ್ವೇಷದಿಂದ ಸುಳ್ಳು ದೂರನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.